
ಒಂದು ಕತೆ ನೆನಪಾಗುತ್ತದೆ. ಇದು ಬಾಗಲೋಡಿ ದೇವರಾಯರು ಬರೆದ ಕತೆ; ಅದರ ಹೆಸರು 'ಅಜ್ಜ ನೆಟ್ಟ ಮರ'. ಇದು ದಕ್ಷಿಣ ಕನ್ನಡದ ಪುತ್ತೂರಿನ ಬಳಿಯ ಹಳ್ಳಿಯೊಂದರಲ್ಲಿರುವ ಮರ. ಅನೇಕ ಶತಮಾನದ ಹಿಂದೆ ಕಟ್ಟಿದ ಭವ್ಯ ಮನೆಯೊಂದರ ಎದುರು ಇರುವ ಈ ಮಾವಿನ ಮರ ನೂರಾರು ವರ್ಷ ಹಳೆಯದು. ನೂರಾರು ಅಡಿ ಎತ್ತರ ಬೆಳೆದು ಕೊಂಬೆಗಳನ್ನು ಮೋಡಗಳಲ್ಲಿ ಆಡಿಸುತ್ತಿರುವಂತೆ ಕಾಣುವ ಈ ಮರ ಸಾವಿರಾರು ಹಕ್ಕಿಗಳಿಗೆ, ನೆರಳು ಅರಸಿ ಬರುವ ಪ್ರಾಣಿಗಳಿಗೆ ಆಶ್ರಯ ನೀಡಿದೆ. ಆ ಪುರಾತನ ಮನೆಯ ನಾಲ್ಕಾರು ತಲೆಮಾರುಗಳು ಈ ಮರದ ತಂಪಿನಲ್ಲಿ ಬದುಕಿವೆ. ಈಗ ಇರುವ ಗಂಡ, ಹೆಂಡತಿ ಮತ್ತು ಮಗ ಕೂಡ ಈ ಮರದ ಆಶ್ರಯದಲ್ಲೇ ಬೆಳೆದವರು. ಮಗನಿಗಂತೂ ಈ ಮರ ತುಂಬ ಇಷ್ಟ. ಈ ಮರದಲ್ಲಿ ಆಟ ಆಡುವ, ಅವಿತುಕೊಳ್ಳುವ, ನೆರಳಲ್ಲಿ ಕುಣಿದಾಡುವ ಹುಡುಗ ಈತ. ಈ ಮರ ಈಗ ಹಣ್ಣು ಬಿಡುತ್ತಿಲ್ಲ, ಹಾಗೆಯೇ ಬೃಹದಾಕಾರವಾಗಿ ನಿಂತಿದೆ. ಹೀಗಿರುವಾಗ ಒಬ್ಬ ಬ್ಯಾರಿಯ ಕಣ್ಣು ಈ ಮರದ ಮೇಲೆ ಬೀಳುತ್ತದೆ. ಈ ಮರವನ್ನು ತನಗೆ ಮಾರಿದರೆ ಮನೆಯ ಯಜಮಾನನಿಗೆ ನೂರಾರು ರೂಪಾಯಿ ಬರುವುದಾಗಿ ಹೇಳುತ್ತಾನೆ. ಯಜಮಾನ ಈ ಬಗ್ಗೆ ಉದಾಸೀನನಾಗಿದ್ದು ಮಾತಾಡುವುದಿಲ್ಲ, ಯಜಮಾನಿಯ ಹತ್ತಿರ ಮಾತಾಡಿದರೆ ಆಕೆಗೆ ಮೊದಮೊದಲು ಕೋಪ; ಆಮೇಲೆ ಹಣದ ಮೊತ್ತಕ್ಕೆ ಮೆದುವಾಗುತ್ತಾಳೆ. ಚಿನ್ನದ ಸರ ಮಾಡಿಸಿಕೊಳ್ಳಬಹುದು ಎಂಬ ಆಸೆ ಆಕೆಯಲ್ಲಿ ಹುಟ್ಟುತ್ತದೆ. ಮಗ ಮರ ಮಾರಲು ಒಪ್ಪುವುದಿಲ್ಲ. ಅದನ್ನು ಅಪ್ಪಿಕೊಂಡು ಕೊಡಲಿ ಹಾಕದಂತೆ ತಡೆಯುತ್ತಾನೆ. ಆದರೆ, ಯಜಮಾನ ಮತ್ತು ಯಜಮಾನಿ ಅವನಿಗೂ ಹಣದ ಆಸೆ ತೋರಿಸುತ್ತಾರೆ. ಅನೇಕ ಬಗೆಯ ವಾಂಛಲ್ಯ ಒಡ್ಡುತ್ತಾರೆ. ಮನಸ್ಸಿಲ್ಲದೆ ಆತ ಸುಮ್ಮನಾಗುತ್ತಾನೆ. ದೈತ್ಯ ಮರವನ್ನು ಕಡಿದುಕೊಂಡು ಹೋದ ಬ್ಯಾರಿ ತುಂಡುಗಳಾಗಿ ಕತ್ತರಿಸಿ ಹಲಗೆ, ಟೀರು, ರಿಪೀಸು ಮಾಡಿಕೊಂಡು ಸಾವಿರಾರು ರೂಪಾಯಿ ಗಳಿಸುತ್ತಾನೆ.



ಇತ್ತ ಮಗ ಬೆಳೆಯುತ್ತಾನೆ. ಅವನಿಗೆ ಹಣದ ಹುಚ್ಚು ಹಿಡಿಯುತ್ತದೆ. ಮೀನಿನ ಕಾಂಟ್ರಾಕ್ಟ್ ತೆಗೆದುಕೊಳ್ಳುವ ಆತ ಸಾಕಷ್ಟು ಹಣ ಹೂಡುವುದಕ್ಕಾಗಿ ಮನೆಯಲ್ಲಿಯ ಚಿನ್ನದ ಒಡವೆ, ಚಿನ್ನದ ದೇವರ ಮೂರ್ತಿಗಳು, ಪಟಗಳು ಎಲ್ಲವನ್ನೂ ಮಾರುತ್ತಾನೆ. ಆತ ಮಹಾ ಶ್ರೀಮಂತನಾಗುತ್ತಾನೆ. ತಂದೆ ತಾಯಿ ಮುದಿಯಾಗಿದ್ದಾರೆ. ಯಾರೋ ಬಂದು ಅವನ ದೊಡ್ಡ ಮನೆಯನ್ನು ಕ್ರಯಕ್ಕೆ ಕೇಳುತ್ತಾರೆ. ಬೆಲೆ ಕೂಡ ಆಕರ್ಷಕವಾಗಿದೆ. ಅದನ್ನು ಮಾರಕೂಡದೆಂದು ತಂದೆತಾಯಿ ಹಟ ಹಿಡಿಯುತ್ತಾರೆ. ಅವರ ಮಾತನ್ನು ಕೇಳದೆ ಅದನ್ನು ಮಾರಿ ಮುದುಕರನ್ನು ಮಂಗಳೂರಿಗೆ ಬರಲು ಹೇಳಿ ಹೊರಟು ಹೋಗುತ್ತಾನೆ. ತಂದೆ ಹೊರಟಾಗ ಮನೆ ಎದುರಿನ ಮಾವಿನ ಬೇರಿಗೆ ಎಡವಿ ಬಿದ್ದು ಸಾಯುತ್ತಾನೆ.

ಹಣ ಮತ್ತು ಲಾಭ ಧ್ಯಾನಿಸುವ ಮನಸ್ಸಿಗೆ ಆ ಮಾವಿನಮರ ಬರಡು, ಮುದಿ; ಮನೆ ಹಳೆಯದು, ನಿರುಪಯುಕ್ತ. ಆದರೆ ಒಂದು ದೊಡ್ಡ ಕುಟುಂಬದ ಅನೇಕ ತಲೆಮಾರುಗಳ ಜನರ ನೆನಪು, ಕನಸು, ಜೀವನದ ವಿವರಗಳಿಗೆ ಕಾರಣವಾದ ಮನೆ ಮತ್ತು ಮರ ಬೇಂದ್ರೆಯವರ ಸಾಧನಕೇರಿ ಮತ್ತು ಧಾರವಾಡದ ಪರಿಸರ ಇದ್ದಂತೆ. ಅಂತರರಾಷ್ಟ್ರೀಯ ಮನಸ್ಸಿಗೆ ಇದೆಲ್ಲ ವ್ಯರ್ಥ. ನಂಬಿಕೆಯ, ಕನಸಿನ, ಕಾವ್ಯದ ಜೀವಕ್ಕೆ ಇದು ಸ್ಫೂರ್ತಿಯ ಸೆಲೆ.